ಸಾಕ್ಷಿಯನ್ನು ದಿಃ **22.10.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ ಜಿ ವಕೀಲರಿಂದಃ-

1ನೇ ಪ್ರತಿವಾದಿಗೆ ಹಣ ಪಾವತಿಸಿದ ಬಗ್ಗೆ ದಿನಾಂಕ 11.09.2014, 21.10.2014 ರ ಎರಡು ರಶೀದಿಗಳನ್ನು ಹಾಜರುಪಡಿಸಿದ್ದು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ದಿನಾಂಕ 25.04.2014 ರಂದು 1ನೇ ಪ್ರತಿವಾದಿ ಬರೆದುಕೊಟ್ಟ ಹಣ ಸಂದಾಯ ರಶೀದಿಯನ್ನು ನಿಪಿ 7 ಎಂದು, ದಿನಾಂಕ 23.08.2013 ರ ನೋಂದಾಯಿತ ಕರಾರಿನ ದೃಢೀಕೃತ ನಕಲನ್ನು ನಿಪಿ 8 ಎಂದು,

ದಿನಾಂಕ 21.12.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 9 ಎಂದು, ದಿನಾಂಕ 08.11.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 10 ಎಂದು, ದಿನಾಂಕ 09.11.2021 ರ ಎರಡು ಕ್ರಯದ ಕರಾರುಗಳ ದೃಢೀಕೃತ ನಕಲುಗಳನ್ನು ನಿಪಿ 11 ಮತ್ತು ನಿಪಿ 12 ಎಂದು, ದಿನಾಂಕ 30.10.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 13 ಎಂದು, ದಿನಾಂಕ 16.11.2021 ರ ಎರಡು ಕ್ರಯದ ಕರಾರುಗಳ ದೃಢೀಕೃತ ನಕಲುಗಳನ್ನು ನಿಪಿ 14 ಮತ್ತು 15 ಎಂದು, ದಿನಾಂಕ 08.11.2021 ರ ಒಟ್ಟು ಏಳು ಕ್ರಯದ ಕರಾರುಗಳ ದೃಢೀಕೃತ ನಕಲುಗಳನ್ನು ನಿಪಿ 16 ರಿಂದ 22 ಎಂದು, ದಿನಾಂಕ 09.11.2021 ರ ಮೂರು ಕ್ರಯದ ಕರಾರುಗಳ ದೃಢೀಕೃತ ನಕಲುಗಳನ್ನು ನಿಪಿ 23 ರಿಂದ 25 ಎಂದು, ದಿನಾಂಕ 04.11.2021 ರ 7 ಕ್ರಯದ ಕರಾರುಗಳ ದೃಢೀಕೃತ ನಕಲುಗಳನ್ನು ನಿಪಿ 26 ರಿಂದ 32 ಎಂದು, ದಿನಾಂಕ 08.11.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 33 ಎಂದು, ದಿನಾಂಕ 29.10.2021 ರ 4 ಕ್ರಯದ ಕರಾರುಗಳ ದೃಢೀಕೃತ ನಕಲುಗಳನ್ನು ನಿಪಿ 34 ರಿಂದ 37 ಎಂದು, ದಿನಾಂಕ 30.10.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 38 ಎಂದು, ದಿನಾಂಕ 04.11.2021 ರ 2 ಕರಾರುಗಳ ದೃಢೀಕೃತ ನಕಲುಗಳನ್ನು ನಿಪಿ 39 ಮತ್ತು 40 ಎಂದು, ದಿನಾಂಕ 30.10.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 41 ಎಂದು, ದಿನಾಂಕ 29.10.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 42 ಎಂದು, ದಿನಾಂಕ 09.11.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 43 ಎಂದು, ದಿನಾಂಕ 08.11.2021 ರ ಕ್ರಯದ ಕರಾರಿನ ದೃಢೀಕೃತ ನಕಲನ್ನು ನಿಪಿ 44 ಎಂದು, ಅಸಲು ದಾವೆ ಸಂಖ್ಯೆ 157/2022 ರ ಆದೇಶಿಕ ಹಾಳೆ, ವಾದ ಪತ್ರ, ರಾಜೀ ಅರ್ಜಿ ಮತ್ತು ರಾಜೀ ಡಿಕ್ರಿಯ ದೃಢೀಕೃತ ನಕಲುಗಳನ್ನು ಕ್ರಮವಾಗಿ ನಿಪಿ 45 ರಿಂದ 48 ಎಂದು ಗುರುತಿಸಲಾಯಿತು.

ನಿಪಿ 1 ರ ದಾಖಲೆಯಲ್ಲಿ ದಿನಾಂಕ 13.11.2013 ರಂದು ನಾನು 1ನೇ ಪ್ರತಿವಾದಿಗೆ ರೂ 5,50,000/- ಹಣ ಪಾವತಿಸಿದ ಬಗ್ಗೆ ಷರಾ ಅನ್ನು ಬರೆಯಲಾಗಿದೆ. ಸದರಿ ಷರಾಗೆ 1ನೇ ಪ್ರತಿವಾದಿ, ಆಕೆಯ ಗಂಡ 2ನೇ ಪ್ರತಿವಾದಿ ಹಾಗೂ ಸಾಕ್ಷಿದಾರರು ಸಹಿ ಹಾಕಿದ್ದಾರೆ ಅದೇ ರೀತಿ ದಿನಾಂಕ 28.12.2013 ರಂದು ನಾನು 1ನೇ ಪ್ರತಿವಾದಿಗೆ ರೂ 4,50,000/- ಹಣ ಪಾವತಿಸಿದ ಬಗ್ಗೆ

ಷರಾವನ್ನು ಬರೆದಿದ್ದು 1 ವತ್ತು 2ನೇ ಪ್ರತಿವಾದಿಯರು ಹಾಗೂ ಸಾಕ್ಷಿದಾರರು ಸಹಿ ಹಾಕಿದ್ದಾರೆ ಅದೇ ರೀತಿ ದಿನಾಂಕ 18.05.20214 ರಂದು ನಾನು 1ನೇ ಪ್ರತಿವಾದಿಗೆ ರೂ 3 ಲಕ್ಷ ಹಣ ಪಾವತಿಸಿದ ಬಗ್ಗೆ ಷರಾ ಬರೆದಿದ್ದು ಅದಕ್ಕೆ 1 ಮತ್ತು 2ನೇ ಪ್ರತಿವಾದಿಯರು ಹಾಗೂ ಸಾಕ್ಷಿದಾರರು ಸಹಿ ಹಾಕಿರುತ್ತಾರೆ ಸದರಿ ಷರಾಗಳನ್ನು ನಿಶಾನೆಯಾಗಿ ಗುರುತಿಸುವಂತೆ ವಾದಿ ಪರ ವಕೀಲರು ಕೇಳಿರುತ್ತಾರೆ. (ಪ್ರತಿವಾದಿಯರ ಪರ ವಕೀಲರಾರದ ಶ್ರೀ ಎಂ ಆರ್ ಹೆಚ್ ವಕೀಲರು ಸದರಿ ಷರಾಗಳನ್ನು ಗುರುತಿಸಲು ತಕರಾರು ಇದೆ ಎಂದು ಹೇಳುತ್ತಾರೆ.) ದಿನಾಂಕ 10.09.2013 ರ ನೋಂದಾಯಿತ ಕ್ರಯದ ಕರಾರನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದೆ. ಮೇಲೆ ಹೇಳಿದ ಷರಾಗಳು ಸದರಿ ದಾಖಲೆಯ ಕೊನೆಯ ಪುಟದ ಹಿಂಭಾಗದಲ್ಲಿ ಬರೆಯಲಾಗಿದೆ. ಸದರಿ ಷರಾಗಳ ಬಗ್ಗೆ ವಾದಿಯು ವಾದ ಪತ್ರದಲ್ಲಿ ಹೇಳಿದ್ದು ಆ ಕಾರಣದಿಂದ ಶ್ರೀ ಎಂ ಆರ್ ಹೆಚ್ ವಕೀಲರು ಮಾಡಿದ ಕೋರಿಕೆಯನ್ನು ತಳ್ಳಿ ಹಾಕಿ ಸದರಿ ಷರಾಗಳನ್ನು ನಿಪಿ 1(ಎ) ಇಂದ (ಸಿ) ಎಂದು ಗುರುತಿಸಲಾಯಿತು. ಅವುಗಳಲ್ಲಿ 1 ಮತ್ತು 2ನೇ ಪ್ರತಿವಾದಿಯರ ಸಹಿಗಳನ್ನು ಒಟ್ಟಾಗಿ ನಿಪಿ 1(ಡಿ) ಮತ್ತು (ಎಫ್) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.